JANUARY 25, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ದೇಶದ ಚುನಾವಣಾ ಪ್ರಕ್ರಿಯೆಯಲ್ಲಿ ತೊಡಗಿರುವ ಹಾಗೂ ಪ್ರಜಾಪ್ರಭುತ್ವಕ್ಕೆ ಪುಷ್ಟಿ ನೀಡುವಲ್ಲಿ ತಳಮಟ್ಟದಲ್ಲಿ ಕೆಲಸ ನಿರ್ವಹಿಸುವ ಎಲ್ಲರಿಗೂ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಭಿನಂದನೆ ಸಲ್ಲಿಸಿ, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಆಕಾಶವಾಣಿಯ ಜನಪ್ರಿಯ ಮನ ಕಿ ಬಾತ್ ನ, 130 ನೇ ಆವೃತ್ತಿಯಲ್ಲಿ ದೇಶ ವಿದೇಶಗಳಲ್ಲಿರುವ ಭಾರತೀಯರನ್ನು ಉದ್ದೇಶಿಸಿ ಅವರು ಮಾತನಾಡಿದರು. ಇಂದು ಆಯೋಜಿತ, ರಾಷ್ಟ್ರೀಯ ಮತದಾರರ ದಿನದ ಬಗ್ಗೆ ಉಲ್ಲೇಖಿಸಿದ ಪ್ರಧಾನಮಂತ್ರಿ ಅವರು, ಮತದಾರರು ದೇಶದ ಪ್ರಜಾಪ್ರಭುತ್ವದ ಆತ್ಮವಿದ್ದಂತೆ, ಮತದಾರ ದಿನದಂದು, 18 ವರ್ಷ ತುಂಬಿದ ಪ್ರತಿಯೊಬ್ಬರು ಮತದಾರರಾಗಿ ಹೆಸರು ನೋಂದಾಯಿಸುವಂತೆ ಕರೆ ನೀಡಿದರು, ಹೆಸರು ನೋಂದಣಿ ಹಾಗೂ ಮತದಾನ ಪ್ರಕ್ರಿಯೆ ದೇಶದ ಪ್ರಜಾಪ್ರಭುತ್ವವನ್ನು ಬಲಪಡಿಸುತ್ತದೆ ಎಂದರು. ನಾಳೆ, ಜನವರಿ 26, ದೇಶದ ಸಂವಿಧಾನ ಜಾರಿಗೆ ಬಂದ ದಿನವಾಗಿದ್ದು, ಸಂವಿಧಾನ ನಿರ್ಮಾತೃಗಳಿಗೆ ಗೌರವ ಸಲ್ಲಿಸುವ ಅವಕಾಶವಾಗಿದೆ ಎಂದರು. ಪ್ರಧಾನಮಂತ್ರಿ ಅವರು, ದೇಶವಾಸಿಗಳಿಗೆ 77 ನೇ ಗಣರಾಜ್ಯೋತ್ಸವ ದಿನಾಚರಣೆಯ ಪೂರ್ವಭಾವಿ ಶುಭಾಶಯಗಳನ್ನು ಕೋರಿದರು.

<><><>

ಭಾರತ ಚುನಾವಣಾ ಆಯೋಗ, ಕರ್ನಾಟಕ ವತಿಯಿಂದ, ಬೆಂಗಳೂರು ನಗರದ ಸರ್. ಪುಟ್ಟಣ್ಣ ಚೆಟ್ಟಿ ಪುರಭವನ ದಲ್ಲಿ, ಇಂದು ಆಯೋಜಿತ 'ರಾಷ್ಟ್ರೀಯ ಮತದಾರರ ದಿನಾಚರಣೆ–2026' ಕಾರ್ಯಕ್ರಮಕ್ಕೆ, ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಚಾಲನೆ ನೀಡಲಿದ್ದಾರೆ. 'ನನ್ನ ಭಾರತ, ನನ್ನ ಮತ' ಈ ಬಾರಿಯ ಮತದಾರರ ದಿನಾಚರಣೆ ಘೋಷವಾಕ್ಯವಾಗಿದೆ, 'ಭಾರತೀಯ ಪ್ರಜಾಪ್ರಭುತ್ವದ ಹೃದಯದಲ್ಲಿ ನಾಗರಿಕರು' ಎಂಬುದು ಶೀರ್ಷಿಕೆಯಾಗಿದೆ.

<><><>

ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಇಂದು ಬೆಳಗ್ಗೆ ಕೋಲಾರ ನಗರದಲ್ಲಿ ಆಯೋಜಿತ, ಹೊಸ ಮತದಾರರ ನೋಂದಣಿ ಅಭಿಯಾನದ ಜನಜಾಗೃತಿ ಜಾಥಾ ಹಾಗೂ ಸೈಕಲ್ ಜಾಥಾಕ್ಕೆ ಜಿಲ್ಲಾ ಪಂಚಾಯಿತಿ ಸಿ.ಇ.ಓ ಡಾಕ್ಟರ ಪ್ರವೀಣ ಪಿ. ಬಾಗೇವಾಡಿ ಚಾಲನೆ ನೀಡಿದರು.

<><><>

ಚುನಾವಣಾ ಪ್ರಕ್ರಿಯೆಯ ಅತ್ಯುತ್ತಮ ಕಾರ್ಯಕ್ಷಮತೆಗಾಗಿ ನೀಡಲಾಗುವ 2025–26ನೇ ಸಾಲಿನ, ರಾಜ್ಯ ಮಟ್ಟದ ಅತ್ಯುತ್ತಮ ಚುನಾವಣಾ ಅಭ್ಯಾಸ ಪ್ರಶಸ್ತಿಗೆ ಚಿತ್ರದುರ್ಗ ಜಿಲ್ಲೆಯ ಇಬ್ಬರು ಅಧಿಕಾರಿಗಳು ಭಾಜನರಾಗಿದ್ದಾರೆ. ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳ ವಿಭಾಗದಲ್ಲಿ, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಹಾಗೂ ಬಿ.ಎಲ್.ಓ. ವಿಭಾಗದಲ್ಲಿ ಚಳ್ಳಕೆರೆ ವಿಧಾನಸಭಾ ಕ್ಷೇತ್ರದ, ಉಪ್ಪಾರಹಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಎನ್. ಅಂಬಿಕಾ ಪ್ರಶಸ್ತಿಗೆ ಭಾಜನರಾಗಿದ್ದಾರೆ.

<><><>

ಹೆಣ್ಣು ಮಕ್ಕಳ ಶಿಕ್ಷಣ, ಉದ್ಯೋಗ, ಘನತೆಯ ಬದುಕಿನ ಕನಸಿಗೆ ಬೆಂಬಲವಾಗಿ ನಿಂತು ಅವರನ್ನು ಸಮಾಜದ ಆಸ್ತಿಯಾಗಿ ಬದಲಿಸುವ ಹೊಣೆ ಎಲ್ಲರದ್ದಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ರಾಷ್ಟ್ರೀಯ ಹೆಣ್ಣು ಮಕ್ಕಳ ದಿನದ ಅಂಗವಾಗಿ, ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಹೆಣ್ಣು ಭ್ರೂಣಹತ್ಯೆ, ಬಾಲ್ಯವಿವಾಹ, ವರದಕ್ಷಿಣೆ ಮೊದಲಾದ ಪಿಡುಗುಗಳ ವಿರುದ್ಧ ಎಲ್ಲರೂ ನಿರಂತರ ಧ್ವನಿ ಎತ್ತಬೇಕು ಎಂದರು.

<><><>

ಧಾರವಾಡದ ರ್‍ಯಾಪಿಡ್ ಸಂಸ್ಥೆ, ದೌರ್ಜನ್ಯಕ್ಕೆ ಒಳಗಾದ ಶೋಷಿತ ಮಹಿಳೆಯರಿಗೆ ಸಕಾಲಿಕವಾಗಿ ಸ್ಪಂದಿಸಿ, ಅವರ ಮನೋಬಲ ಹೆಚ್ಚಿಸಿ, ಆರ್ಥಿಕ ಸಬಲೀಕರಣಕ್ಕೆ ಸಹಕರಿಸುತ್ತಿದೆ. ಈ ತನಕ 6 ಸಾವಿರಕ್ಕೂ ಹೆಚ್ಚು ಮಹಿಳೆಯರು ಟೇಲರಿಂಗ್ ತರಬೇತಿ, ಕಂಪ್ಯೂಟರ್ ವೃತ್ತಿ ಶಿಕ್ಷಣ ಸೇರಿದಂತೆ ಕೌಶಲ ತರಬೇತಿ ಪಡೆದಿದ್ದಾರೆ. ಸಂಸ್ಥೆಯ ಕಾರ್ಯವೈಖರಿ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ರ್‍ಯಾಪಿಡ್ ಸಂಸ್ಥೆಯ ಕಾರ್ಯದರ್ಶಿ ವಾಣಿ ಪುರೋಹಿತ್

<><><>

ವಾಣಿ ಪುರೋಹಿತ 38 ಸೆಕೆಂದುಗಳು

<><><>

ರಾಷ್ಟ್ರೀಯ ಮೂಲಸೌಕರ್ಯ ಪರಿದೃಶ್ಯದಲ್ಲಿ, ಕರ್ನಾಟಕ ರಾಜ್ಯ, ಮಹತ್ವದ ಯೋಜನೆಗಳನ್ನು ಪಡೆದ, ಗರಿಮೆ ಹೊಂದಿದೆ. ಪ್ರಗತಿ @ 50 ಪ್ರಕಲ್ಪದಡಿ, ಪ್ರೊಜೆಕ್ಟ್ ಮಾನಿಟರಿಂಗ್ ಗ್ರುಪ್ ಪೋರ್ಟಲ್‌ನಲ್ಲಿ, ಕರ್ನಾಟಕಕ್ಕೆ, 6 ಲಕ್ಷ 48 ಸಾವಿರದ 436 ಕೋಟಿ ರೂಪಾಯಿಗಳ, ಸಂಚಿತ ಹೂಡಿಕೆಯನ್ನು ಒಳಗೊಂಡ, 187 ಯೋಜನೆಗಳ ಮೇಲ್ವಿಚಾರಣೆ, ಕೇಂದ್ರ ಮಾಡುತ್ತಿದೆ. ಕೇಂದ್ರ ಜಲಶಕ್ತಿ ಸಚಿವಾಲಯದ ಅಧೀನದಲ್ಲಿ, ರಾಜ್ಯಕ್ಕೆ ಒಟ್ಟು 4 ಸಾವಿರದ 830 ಕೋಟಿ ರೂಪಾಯಿ ವೆಚ್ಚದ 4 ಪ್ರಮುಖ ನೀರಾವರಿ ಯೋಜನೆಗಳನ್ನು, ಅನುಮೋದಿಸಲಾಗಿದೆ. ಇವುಗಳಲ್ಲಿ 3 ಯೋಜನೆಗಳಿಗೆ ತಾತ್ವಿಕ ಒಪ್ಪಿಗೆ ದೊರೆತಿದ್ದು, ಪ್ರಸ್ತುತ ಒಂದು ಯೋಜನೆ ಸಾವಿರದ 606 ಕೋಟಿ ರೂಪಾಯಿ ವೆಚ್ಚದಲ್ಲಿ ಅನುಷ್ಠಾನಗೊಳ್ಳುತ್ತಿದೆ.

<><><>

ಖೇಲೋ ಇಂಡಿಯಾ, 18 ವರ್ಷದೊಳಗಿನವರ, ಕಳರಿಪಯಟ್ಟು ರಾಷ್ಟ್ರೀಯ ಲೀಗ್ ಪಂದ್ಯಾವಳಿಯಲ್ಲಿ, ಮೊದಲ ರನ್ನರ್–ಅಪ್ ಸ್ಥಾನ ಪಡೆದ ಕರ್ನಾಟಕ ರಾಜ್ಯ ತಂಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದ್ದಾರೆ. ತಿರುವನಂತಪುರಂ ನಲ್ಲಿ ಜರುಗಿದ ಪಂದ್ಯಾವಳಿಯಲ್ಲಿ ರಾಜ್ಯ ತಂಡ, 3 ಚಿನ್ನ, 2 ಬೆಳ್ಳಿ ಹಾಗೂ 1 ಕಂಚಿನ ಪದಕಗಳೊಂದಿಗೆ ಒಟ್ಟು 6 ಪದಕಗಳನ್ನು ಜಯಿಸಿದೆ. ರಾಜ್ಯದ ಯುವ ಕ್ರೀಡಾಪಟುಗಳು ಶಿಸ್ತು, ಕೌಶಲ ಹಾಗೂ ಭಾರತದ ಪ್ರಾಚೀನ ಸಮರ ಕಲೆಯ, ಶ್ರೀಮಂತ ಪರಂಪರೆಯನ್ನು ಪ್ರದರ್ಶಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>